# ಸರ್‌ಪಾಸ್ ಹತ್ತಿದ ರೋಮಾಂಚನ

ದಕ್ಷಿಣದವರಿಗೆ ಹಿಮಾಲಯದ ಸಾಲಿನಲ್ಲಿ ಚಾರಣ ಮಾಡುವುದು ಸುಂದರ ಅನುಭವ. ನಾನು ಅಲ್ಲಿ ಮಾಡಿದ ಮೂರು ನಾಲ್ಕು ಚಾರಣಗಳಲ್ಲಿ ಸರ್‌ಪಾಸ್ ಚಾರಣ ಅತ್ಯಂತ ರೋಮಾಂಚನಕಾರಿಯಾದದ್ದು. ಸಮುದ್ರ ಮಟ್ಟದಿಂದ ಸುಮಾರು 14.000 ಅಡಿಗಳಷ್ಟು ಎತ್ತರದಲ್ಲಿರುವ ಈ ಜಾಗವನ್ನು ತಲುಪಲು ಕುಲುಮನಾಲಿಯ ಹತ್ತಿರದ 'ಕಸೋಲ್' ಬೇಸ್ ಕ್ಯಾಂಪ್ ತಲುಪಬೇಕು. ಅಲ್ಲಿಂದ ಮುಂದೆ ಗ್ರಹಣ್, ಪದ್ರಿ, ಮಿನ್ತಾಜ್, ನಗಾರು ಕ್ಯಾಂಪ್‌ಗಳನ್ನು ದಾಟಿದರೆ ಸರ್ಪಾಸ್. ಆ ಜಾಗಕ್ಕೆ ಹೋಗಬೇಕಾದರೆ ಹಿಮಾಲಯದ ಎರಡು ವಲಯಗಳನ್ನು ದಾಟಿ ಮುಂದೆ ಹೋಗಬೇಕಾಗುತ್ತದೆ.

ದಟ್ಟವಾದ ಕಾಡು ಒಂದಾದರೆ, ಬಯಲು ಬಂಡೆಗಳ ಪ್ರದೇಶ ಇನ್ನೊಂದೆಡೆ. ಇದಾದ ನಂತರ ಸಿಗುವುದೇ ಹಿಮವನ್ನೇ ಹೊದ್ದು ಮಲಗಿದಂತಿರುವ ಗಿರಿಶಿಖರಗಳು. ತುತ್ತ ತುದಿಯಲ್ಲಿ ಸುಂದರ ಕೊಳವಿದೆ. ಅದೇ 'ಸರ್' (ಕೊಳ). ಒಂದಕ್ಕಿಂತ ಒಂದು ಎತ್ತರದ ಪರ್ವತಗಳು. ಒಂದು ಶಿಖರ ಏರಿ ನಿಂತರೆ ಮತ್ತೊಂದು ಶಿಖರ ತೊಡೆತಟ್ಟಿ ನಿಲ್ಲುತ್ತದೆ. ಅಂತಹ ಸವಾಲುಗಳನ್ನು ಎದುರಿಸಿ ಹೋದರೆ ನೈಜ ಪ್ರಕೃತಿಯ ಸವಿಯನ್ನು ಸವಿಯಬಹುದು. ಹಿಮದಲ್ಲಿ ಜಾರಬಹುದು, ಎಲ್ಲಿ ಬೇಕಾದರೂ ನೀರು ಹಿಡಿದು ಕುಡಿಯಬಹುದು, ಮೌನದ ಮಹತ್ವ ಅರಿಯಬಹುದು. ಇಳಿಯುವಾಗ ಸಿಗುವ ಬಿಸ್ಕರಿ ಮತ್ತು ಬಂಧ್ಕಟ್, ಭಾರತದ ಸ್ವಿಟ್ಜರ್‌ಲೆಂಡ್ ಎಂದೇ ಹೆಸರುವಾಸಿಯಾದ ಜಾಗ.

ಈ ಚಾರಣದಲ್ಲಿ ಮುಖ್ಯವಾಗಿ ನಾನು ಕಂಡುಕೊಡ್ಡಿದ್ದು ದೇಹಬಲದ ಜೊತೆ 'ಮನೋಬಲ' ತುಂಬಾ ಕೆಲಸ ಮಾಡುತ್ತದೆ. ಅಲ್ಲಿನ ವಾತಾವರಣ ಎಷ್ಟು ರೋಮಾಂಚಕವೋ ಅಷ್ಟೇ ರೌದ್ರಗುಣವನ್ನು ಹೊಂದಿದೆ.

**—ನಟರಾಜ್ ಎಸ್. ಭಟ್, ನಟ**

ದಾರಿ ತಪ್ಪಿದರೆ ಹಿಂತಿರುಗುವುದು ಕಷ್ಟ. ಇಂಥ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶಕರ ನೆರವು ಪಡೆದುಕೊಳ್ಳಬೇಕು.

- ಶಿಖರಗಳ ತುದಿ ತಲುಪಿದಾಗ ಚಾರಣದ ಆಯಾಸವೆಲ್ಲ ಕಳೆದು, ಮನಸ್ಸಿಗೆ ಗುರಿ ತಲುಪಿದ ಉಲ್ಲಾಸ ಆವರಿಸುತ್ತದೆ. ಫೋಟೋ ತೆಗೆಯುವ ಅತ್ಯುತ್ಸಾಹದಿಂದ ಕಡಿದಾದ ಬೆಟ್ಟದ ತುದಿಯಿಂದ ಚಾರಣಿಗರು ಜಾರಿ ಬಿದ್ದ ಸಂದರ್ಭಗಳೂ ಸಾಕಷ್ಟಿವೆ. ಆದುದರಿಂದ ಚಾರಣದ ಸಂತೋಷವನ್ನು ಅನುಭವಿಸುವವರು, ಮೈ ಮರೆಯಬಾರದು.
- ಚಾರಣದ ಗಮ್ಯ ತಾಣದಲ್ಲಿ ಎರಡು ತಾಸಾದರೂ ಸಮಯ ಕಳೆದರೆ ಮೈ ಮನಗಳನ್ನು ಉಲ್ಲಾಸ ಆವರಿಸುತ್ತದೆ. ಕನಸಿನ ತಾಣವನ್ನು ಎಲ್ಲಾ ದಿಕ್ಕುಗಳಿಂದಲೂ ಸರಿಯಾಗಿ ವೀಕ್ಷಿಸಲು ಅನುಕೂಲವಾಗುತ್ತದೆ. ಚಾರಣದ ಅನುಭವವನ್ನು ಕೇಳುವುದಕ್ಕಿಂತ ಅನುಭವಿಸಿದರೆ ಅದರ ಸವಿ ತಿಳಿದೀತು. ಕಲ್ಮಶರಹಿತ ವಾತಾವರಣ, ದಟ್ಟ ಹಸಿರಿನ ಬೆಟ್ಟಕಾಡುಗಳು, ಹರಿವ ಝರಿತೊರೆಗಳು ನಮ್ಮನ್ನು ಬೇರೆಯದೇ ಲೋಕಕ್ಕೆ ಕೊಂಡೊಯ್ಯುತ್ತವೆ. ಆದರೆ ಚಾರಣದ ಹೆಸರಿನಲ್ಲಿ ಪ್ರಕೃತಿಯ ಮಡಿಲನ್ನು ಕೊಳಕು ಮಾಡಬಾರದು. ನಾವು ಕಂಡುಂಡ ಪ್ರಕೃತಿಯ ಸಿರಿಯನ್ನು, ಮುಂದಿನ ಜನಾಂಗಕ್ಕೂ ಕಾಯ್ದಿರಿಸುವುದು ನಮ್ಮ ಕರ್ತವ್ಯವಾಗಬೇಕು.

### ಕುತೂಹಲದೊಟ್ಟಿಗೆ ಕಾಳಜಿಯೂ ಬೇಕು

ಪ್ರಕೃತಿಯನ್ನು ಅರಿತುಕೊಳ್ಳುವ ಮಹದಾಸೆ ಇದ್ದರೆ ಮಾತ್ರ ನಿಸರ್ಗ ಸ್ನೇಹಕ್ಕೆ ಸುಲಭ ದಾರಿಯಾಗುತ್ತದೆ. ಯಾರದೋ ಒತ್ತಾಯದಿಂದ ಚಾರಣಕ್ಕೆ ಹೋದಲ್ಲಿ ಅಥವಾ ಪಿಕ್‌ನಿಕ್ ಎಂಬ ಕಲ್ಪನೆಯಲ್ಲಿ ಬೆಟ್ಟವೇರಿದರೆ ಅಂತಹವರಿಗೆ ಬೆಟ್ಟ, ಕಾನನ, ಕಣಿವೆಯು ಸ್ಪಂದಿಸುವುದಿಲ್ಲ.

ಒಮ್ಮೆ ನಮ್ಮೊಂದಿಗೆ ಚಾರಣಿಗರಾಗಿ ಬಂದಿದ್ದ ಓರ್ವರ ಆಸಕ್ತಿ ಎರಡು ಕಿ.ಮೀ. ನಡಿಗೆಯಲ್ಲೇ ಮುಗಿದುಹೋಯಿತು. ದಾರಿಯುದ್ದಕ್ಕೂ ಅವರು ಗೊಣಗುತ್ತಲೇ ಇದ್ದರು. ಸಾಮಾನ್ಯವಾಗಿ ಚಾರಣದಲ್ಲಿ ಎಷ್ಟೇ ಕಷ್ಟವಾಗಲಿ, ಶಿಖರದ ತುದಿ ತಲುಪಿದಾಗ ಅಲ್ಲಿನ ಹಸಿರನ್ನು ನೋಡಿ, ತಂಗಾಳಿಗೆ ಮೈಯೊಡ್ಡಿದಾಗ ಆವರೆಗಿನ ದಣಿವು ಬೇಸರವೆಲ್ಲ ಕಳೆದುಹೋಗುತ್ತದೆ. ಈವರೆಗೆ ಗೊಣಗುತ್ತಿದ್ದವರೂ ಈಗ ಖುಷಿಯಾಗಿರಬೇಕು ಎಂದುಕೊಂಡು, 'ಹೇಗಾಯಿತು ಚಾರಣ?' ಎಂದವರನ್ನು ಕೇಳಿದಾಗ, 'ಇನ್ನು ಮುಂದೆ ಚಾರಣವೆಂದು ನನ್ನನ್ನು ಕರೆದರೆ ನಿಮ್ಮ ಸೊಂಟ ಮುರಿಯುತ್ತೇನೆ' ಎನ್ನಬೇಕೇ? ಮತ್ತೊಮ್ಮೆ ನಮ್ಮ ಸ್ನೇಹಿತರೊಬ್ಬರು ಬಿಳಿ ಅಂಗಿ, ಟೈ ಕಟ್ಟಿಕೊಂಡು, ಲೆದರ್ ಶೂ, ಲೆದರ್ ಸೂಟುಕೇಸ್ ಹಿಡಿದುಕೊಂಡು ಬಂದಿದ್ದರು. ಚಾರಣ ಆರಂಭದ ಸ್ಥಳ ಬಂದಾಗ ಅವರು, ಅಂಗಿ ಬಿಚ್ಚಿ, ಟೈ ತೆಗೆದು ಸೂಟುಕೇಸ್ ಒಳಗೆ ಹಾಕಿ ಮಾಮೂಲಿ ಚಾರಣ ಬಟ್ಟೆ ಹಾಕಿಕೊಂಡರು. ಅವರು 'ಬೆಂಗಳೂರಿನ



ಸರ್‌ಪಾಸ್‌ನಲ್ಲಿ ಕನ್ನಡ ಧ್ವಜ ಎತ್ತಿ ಹಿಡಿದ ಸಂಭ್ರಮದಲ್ಲಿ ನಟರಾಜ